# ಕೃಷ್ಣ – ಸುಧಾಮ (ನಾಟಕ)

ಲೇಖಕ - ವಿ.ಎಸ್ . ಶಿರಹಟ್ಟಿಮಠ
ಜನನ - ೦೧-೦೨-೧೯೫೩
ಸ್ಥಳ - ಗದಗ ಜಿಲ್ಲೆಯ, ಹೊಂಬಳ ಗ್ರಾಮ
ತಂದೆ - ಶಂಕರಯ್ಯ
ತಾಯಿ – ಗುರುಸಿದ್ದವ್ವ
ವೃತ್ತಿ - ಮುಖ್ಯೋಪಾಧ್ಯಾಯರು , ಶ್ರೀ ವೀರಭದ್ರೇಶ್ವರ ಪ್ರೌಢಶಾಲೆ , ಹಲಗಲಿ
ಪ್ರವೃತ್ತಿ - ಅನುವಾದಕರು, ನಾಟಕಕಾರರು

ಕೃತಿಗಳು - ನಾಟಕಗಳು - ತುಂಬದ ಕೊಡ , ನರಗುಂದ ಬಂಡಾಯ , ಮಾಡಿದ್ದುಣ್ಣೊ ಮಾರಾಯ , ಗುಣವಂತ, ರಾಜಕುಮಾರ ಮುಂತಾದ 60 ಕ್ಕೂ ಹೆಚ್ಚಿನ ಮಕ್ಕಳ ನಾಟಕ ರಚಿಸಿದ್ದಾರೆ.

FOR KANNADA

ಪ್ರಶಸ್ತಿಗಳು - 2002 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ.

ಅ) ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ. (Write two synonyms to the each word)

೧. ಗೆಳೆಯ - ಮಿತ್ರ , ಸ್ನೇಹಿತ

೨. ಹೆಂಡತಿ - ಪತ್ನಿ , ಶ್ರೀಮತಿ , ಮಡದಿ

೩. ರಾಜ - ಅರಸ , ರಾಯ

೪. ದುಡಿಮೆ - ಪರಿಶ್ರಮ , ಶ್ರಮಿಸು

ಆ) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ. (Make your own sentences)

೧. ಪರಮಮಿತ್ರ : ಸುಧಾಮನು ಕೃಷ್ಣನ ಪರಮಮಿತ್ರ.

೨. ವಿಶ್ರಾಂತಿ : ನನಗೆ ಈಗ ವಿಶ್ರಾಂತಿ ಬೇಕು.

೩. ಸತ್ಕಾರ : ಕೃಷ್ಣನು ಸುಧಾಮನ ಸತ್ಕಾರ ಮಾಡಿದನು.

೪. ಸಂತೋಷ : ನನಗೆ ಸಂತೋಷ ಆಯಿತು.

೫. ಶ್ರಮಿಸು : ನಾನು ತುಂಬಾ ಶ್ರಮಿಸುತ್ತೇನೆ.

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following in one sentence)

೧. ಸುಧಾಮ ಯಾವುದನ್ನು ಮಾನವಧರ್ಮ ಎನ್ನುತ್ತಾನೆ?

ಉ: ಸುಧಾಮ "ಜೀವನದಲ್ಲಿ ಬಂದುದ್ದನ್ನು ಅನುಭವಿಸುವುದು" ಮಾನವ ಧರ್ಮ ಎಂದು ಹೇಳುತ್ತಾನೆ.

೨. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?

ಉ: ಮಕ್ಕಳಿಗಾಗಿ ಶ್ರೀ ಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ.

FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

೩. ಸುಧಾಮನ ಕಣ್ಣಲ್ಲಿ ನೀರು ಏಕೆ ಬಂತು?

ಉ: ಶ್ರೀ ಕೃಷ್ಣ ಸುಧಾಮನ ಕೈ ಹಿಡಿದು ಒಳಗೆ ಕರೆದುಕೊಂಡು ಬಂದಾಗ ಸುಧಾಮನ ಕಣ್ಣಲ್ಲಿ ಸಂತೋಷದಿಂದ ನೀರು ಬಂತು.

೪. ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು?
ಉ: ಮನೆಗೆ ಮರಳಿದ ಸುಧಾಮನು ತನ್ನ ಮನೆಯ ಜಾಗದಲ್ಲಿ ದೊಡ್ಡ ಅರಮನೆ ನೋಡಿದನು. ಹೆಂಡತಿ, ಮಕ್ಕಳು ರೇಷ್ಮೆ ವಸ್ತ್ರ ಧರಿಸಿ , ಮೈಮೇಲೆ ಚಿನ್ನದ ಒಡವೆಗಳನ್ನು ಧರಿಸಿದ್ದನ್ನು ನೋಡಿದನು.

೫. ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು?
ಉ: ಸುಧಾಮನ ಮನೆಯನ್ನು ಕಟ್ಟಿಸಿದವರು ಶ್ರೀಕೃಷ್ಣ.

ಈ) ಕೆಳಗಿನ ಪ್ರಶ್ನೆಗಳಿಗೆ ಐದು – ಆರು ವಾಕ್ಯಗಳಲ್ಲಿ ಉತ್ತರಿಸಿರಿ. (Answer the following in five – six sentences)

೧. ಕೃಷ್ಣ – ಸುಧಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ ?

ಉ: ಕೃಷ್ಣ ಸುಧಾಮರು ಗುರುಕುಲದಲ್ಲಿ ಒಟ್ಟಿಗೆ ಊಟ ಮಾಡಿದ್ದನ್ನು ನೆನೆಪಿಸಿಕೊಂಡರು. ಕಟ್ಟಿಗೆ ತರಲು ಹೋಗುತ್ತಿದ್ದದ್ದು , ಗುರುಮಾತೆ ಕೊಟ್ಟಿದ್ದ ಹುರಿದ ಕಡಲೆ ತಿಂದದ್ದನ್ನು ನೆನೆಪಿಸಿಕೊಂಡರು. ಕೃಷ್ಣನು ಸುಧಾಮನ ಕಡಲೆ ಕಸಿದು ತಿಂದದ್ದನ್ನು ನೆನೆಪಿಸಿಕೊಂಡರು.

೨. ಕೃಷ್ಣನು ಸುಧಾಮನಿಗೆ ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿರಿ.

ಉ: ಸುಧಾಮನು ದ್ವಾರಕ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರು ಬಂದರು. ಬೇಕಾದ ಎಲ್ಲಾ ವಸ್ತುಗಳನ್ನು ತಂದು, ಮನೆ ನಿರ್ಮಿಸಿದರು ಎಂದು  ಶ್ರೀ ಕೃಷ್ಣನು ಮನೆ ಕಟ್ಟಿಸಿದ ರೀತಿಯನ್ನು ಸುಧಾಮನ ಹೆಂಡತಿ ಈ ರೀತಿ ವಿವರಿಸಿದಳು.

FOR KANNADA

ಉ) ಕೆಳಗಿನ ಮಾತುಗಳನ್ನು ಯಾರು , ಯಾರಿಗೆ , ಯಾವಾಗ ಹೇಳಿದರು? (Who told whom and when)

ಕನ್ನಡಕ್ಕಾಗಿ ಇಲ್ಲಿ ಬನ್ನಿ

೧. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ , ಸ್ನೇಹ , ಗೌರವ.

**ಆಯ್ಕೆ:** ಈ ವಾಕ್ಯವನ್ನು  ವಿ.ಎಸ್ . ಶಿರಹಟ್ಟಿಮಠ ಅವರು ಬರೆದ 'ಕೃಷ್ಣ- ಸುಧಾಮ' ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಸುಧಾಮನು ಹೆಂಡತಿಗೆ ಹೇಳಿದನು.
**ಸಂದರ್ಭ:** ಶ್ರೀ ಕೃಷ್ಣನಲ್ಲಿ ಸಹಾಯ ಕೇಳಲು ಹೇಳುವ ಸಂದರ್ಭದಲ್ಲಿ ಹೇಳಿದನು.

೨. ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ.

**ಆಯ್ಕೆ:** ಈ ವಾಕ್ಯವನ್ನು  ವಿ.ಎಸ್ . ಶಿರಹಟ್ಟಿಮಠ ಅವರು ಬರೆದ 'ಕೃಷ್ಣ- ಸುಧಾಮ' ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಸುಧಾಮನ ಹೆಂಡತಿ, ಸುಧಾಮನಿಗೆ ಹೇಳಿದಳು.

**ಸಂದರ್ಭ:** ಕೃಷ್ಣನಲ್ಲಿ ಮಕ್ಕಳಿಗೋಸ್ಕರ ಸಹಾಯ ಕೇಳಲು ಹೇಳುವ ಸಂದರ್ಭದಲ್ಲಿ ಹೇಳಿದಳು.

೩. ನನಗೆ ಗುರುಕುಲದ ಜೀವನ ನೆನಪಾಗುತ್ತದೆ.

**ಆಯ್ಕೆ:** ಈ ವಾಕ್ಯವನ್ನು ವಿ.ಎಸ್ . ಶಿರಹಟ್ಟಿಮಠ ಅವರು ಬರೆದ 'ಕೃಷ್ಣ- ಸುಧಾಮ' ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಕೃಷ್ಣನು ಸುಧಾಮನಿಗೆ ಹೇಳಿದನು.
**ಸಂದರ್ಭ:** ಗುರುಕುಲದ ಜೀವನ ನೆನಪಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳಿದನು.

೪. ನಿಮಗೂ ರೇಷ್ಮೆ ಬಟ್ಟೆ ಕೊಟ್ಟಿದ್ದಾರೆ.

**ಆಯ್ಕೆ:** ಈ ವಾಕ್ಯವನ್ನು ವಿ.ಎಸ್ . ಶಿರಹಟ್ಟಿಮಠ ಅವರು ಬರೆದ 'ಕೃಷ್ಣ- ಸುಧಾಮ' ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಸುಧಾಮನ ಹೆಂಡತಿ, ಸುಧಾಮನಿಗೆ ಹೇಳಿದಳು.
**ಸಂದರ್ಭ:** ಶ್ರೀ ಕೃಷ್ಣನನ್ನು ಭೇಟಿ ಮಾಡಿ ಬಂದಾಗ ಸುಧಾಮನ ಹೆಂಡತಿ ಮಕ್ಕಳು ರೇಷ್ಮೆ ಬಟ್ಟೆ ತೊಟ್ಟಿದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳಿದಳು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ